ಅಭಿಪ್ರಾಯ ಕೊಟ್ಟಕ್ಷಣ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಭಾವಿಸುವುದು ರಾಜಕೀಯ, ಸಾರ್ವಜನಿಕ ಕ್ಷೇತ್ರದ ಕ್ರಿಯಾಶೀಲತೆಗೆ ಮತ್ತು ಸಾಹಿತ್ಯಕ್ಕೆ ಅತ್ಯಂತ ಅಪಾಯಕಾರಿ. ಅಷ್ಟಲ್ಲದೇ, ನಮ್ಮೆಲ್ಲರಿಗೂ ನಮ್ಮದೇ ಆದ ಪರಿಣತ ಕ್ಷೇತ್ರಗಳಿರುತ್ತವೆ. ಅದನ್ನು ಮರೆತು ಜಗತ್ತಿನ ಎಲ್ಲದರ ಬಗ್ಗೆಯೂ ಅಭಿಪ್ರಾಯ ಕೊಟ್ಟು ನಮ್ಮ ಅಜ್ಞಾನದಿಂದ ವಿಷಯದ ಘನತೆಯನ್ನು ಕಳೆದು ಅದನ್ನು ಲೋಕಾಭಿರಾಮ ಮಾಡಿಬಿಡಬಾರದು.

- **ಅಥೆಂಟಿಸಿಟಿ ಮತ್ತು ಕ್ರೆಡಿಬಿಲಿಟಿ ಮುಖ್ಯ.**

ಹೌದು. ಅದು ಮುಖ್ಯ. ಪಬ್ಲಿಕ್ ಸ್ಪೇಸ್‌ನಲ್ಲಿ ನಮ್ಮ ಅಭಿಪ್ರಾಯವನ್ನು ಇಡುವಾಗ ಬಹಳ ಜಾಗರೂಕರಾಗಿರಬೇಕು. ಅನೇಕರಿಗೆ ಎಲ್ಲ ಕಡೆ ಸಲ್ಲದೇ ಇದ್ದರೆ ತಾವು ಇರ್ರೆಲೆವೆಂಟ್ ಆಗಿಬಿಡುವ ಭಯ. ನಮ್ಮ ಕಾರ್ಯಕ್ಷೇತ್ರದ ಬಗ್ಗೆ ನಂಬಿಕೆಯಿದ್ದರೆ ಈ ಬಗೆಯ ಅನಗತ್ಯ ಒತ್ತಡಗಳಿಗೆ ಮಣಿಯಬೇಕಾಗಿಲ್ಲ. ತನ್ನ ಅಭಿಪ್ರಾಯವೇ ಬಹಳ ಘನವಾದದ್ದು ಅಂತ ಭಾವಿಸುವುದರಲ್ಲಿಯೇ ಏನೋ ಸಮಸ್ಯೆಯಿದೆ... ಅಂಥವರಿಗೆ ಕೇಳಿಸಿಕೊಳ್ಳುವ ವಿನಯ ಇರುವುದಿಲ್ಲ.

- **ಹೀಗಿರುವಾಗ, ತಾನೊಬ್ಬ ಮುಖ್ಯ ಲೇಖಕ ಎನ್ನುವ ಅಸ್ಮಿತೆ ಎಷ್ಟು ಮುಖ್ಯ? ಇದು ಎರಡು ರೀತಿ ಕೆಲಸ ಮಾಡುತ್ತಿರುತ್ತದೆ. ಅದು ಬರವಣಿಗೆಗೆ ಒಂದು ಶಕ್ತಿಯನ್ನು ತಂದುಕೊಡುತ್ತದೆ. ಅದೇ ಕಾಲಕ್ಕೆ ಬೇಜವಾಬ್ದಾರಿಯನ್ನೂ ತುಂಬುತ್ತದೆ. ಆದರೆ ಈ ಅಸ್ಮಿತೆ ಒಬ್ಬ ಬರಹಗಾರನ ಸೃಜನಶೀಲತೆಗೆ ಎಷ್ಟು ಮುಖ್ಯ?**

ಇದನ್ನು ಹೀಗೆ ನೋಡೋಣ. ನಾನು, ನೀವು ಅಥವಾ ಯಾರೇ ಆಗಲಿ, ಒಬ್ಬರನ್ನೇ ಶ್ರೇಷ್ಠ ಬರಹಗಾರ ಎಂದು ಭಾವಿಸಿರುವುದಿಲ್ಲ. ನಮ್ಮ ಓದಿನ ಪ್ರಪಂಚವನ್ನು ಹಲವಾರು ಲೇಖಕರು ನಿರ್ಮಿಸಿರುತ್ತಾರೆ. ಈ ಅರಿವು ಮೊದಲಿರಬೇಕು. ಅದಿದ್ದ ಮೇಲೆ, ಇಡೀ ಸಾಹಿತ್ಯದ ಪರಂಪರೆಯಲ್ಲಿ ತಾನೆಲ್ಲಿದ್ದೇನೆ ಅನ್ನುವುದು ಒಬ್ಬ ಬರಹಗಾರನಿಗೆ ಗೊತ್ತಿರಬೇಕು. ಎಷ್ಟೊಂದು ಸಾಹಿತಿಗಳು ಬದುಕಿನ ಎಷ್ಟೊಂದು ಆಯಾಮಗಳನ್ನು ಸಾಹಿತ್ಯಕ್ಕೆ ಸೇರಿಸುತ್ತ ಬಂದಿದ್ದಾರೆ, ಈ ನಿಟ್ಟಿನಲ್ಲಿ ತಾನು ಯಾವುದನ್ನು ಸೇರಿಸುತ್ತಿದ್ದೇನೆನ್ನುವುದು ತಿಳಿದರೆ ತನ್ನ ಸ್ಥಾನ ಗೊತ್ತಾಗುತ್ತದೆ. ಈ ಸ್ಪಷ್ಟತೆಯಿಲ್ಲದೇ ಹೋದರೆ ನೀವು ಏಕಾಗ್ರತೆಯಿಲ್ಲದೇ ಎಲ್ಲ ದಿಕ್ಕಿಗೂ ಓಡುತ್ತೀರಿ. ಇದು ಒಬ್ಬ ಬರಹಗಾರನಿಗೆ ಅತ್ಯಂತ ಖಾಸಗಿ ಸಂಗತಿ. ಬಹಿರಂಗವಾಗಿ ಚರ್ಚೆ ಮಾಡುವಂಥದಲ್ಲ. ನಿಧಾನವಾಗಿ, ಕಾಲಾಂತರದ ಚಿಂತನೆ ಮತ್ತು ಪ್ರಯೋಗಶೀಲತೆಯ ಮೂಲಕ, ತನ್ನ ಕೃತಿಗಳಿಗೆ ದೊರೆತ ಪ್ರತಿಕ್ರಿಯೆಗಳ ಮೂಲಕ ತಾನೇ ಕಂಡುಕೊಳ್ಳಬೇಕಿರುವುದು. ಇದು ಕೊಡುವ ಆತ್ಮವಿಶ್ವಾಸ ಸೃಜನಶೀಲತೆಗೆ ಬಹಳ ಸಹಾಯಕಾರಿ. ತಪ್ಪು ಗ್ರಹಿಕೆಗಳು ಬೇಜವಾಬ್ದಾರಿಗೆ ದಾರಿ ಮಾಡಿಕೊಡುತ್ತವೆ.

- **ಹಾಗಿದ್ದಾಗ ಒಬ್ಬ ಬರಹಗಾರನಿಗೆ ಓದುವಿಕೆ ಯಾಕೆ ಮುಖ್ಯ ಅನ್ನುವುದು ಮತ್ತು ಯಾವುದನ್ನು ಬರೆಯಬೇಕು, ಯಾವುದನ್ನು ಬರೆಯಬಾರದು ಅನ್ನುವುದೂ ಸಿದ್ಧವಾಗುತ್ತದೆ. ನೀವು ಯಾವುದನ್ನು ಬರೆಯಬಾರದು ಅನ್ನುವುದರ ಬಗ್ಗೆ ಬಹಳ ಪರ್ಟಿಕುಲರ್.**

'ಯಾವುದನ್ನು ಬರೆಯಬಾರದು ಅಂದರೆ? ಅನ್ಸೆಡ್? ವಾಚ್ಯಗೊಳಿಸಬಾರದು ಅನ್ನುವ ಅರ್ಥದಲ್ಲ ಅಥವಾ ಬರೆಯೋಕೆ ಶಕ್ತಿ ಇಲ್ಲ ಹಾಗಾಗಿ ಬರೆಯಬಾರದು ಅಂತಾನಾ?' (ಹೀಗೆ ಕೇಳುವಾಗ ಕೀಟಲೆಯ ಧ್ವನಿಯಿತ್ತು).

- **ಇಲ್ಲ. ಹಾಗಲ್ಲ. ವಾಚ್ಯಗೊಳಿಸಬಾರದು ಅನ್ನುವುದು ಒಂದು ರೀತಿ. ಹಾಗೆಯೇ ಬರೆಯುವಾಗ ಅಥವಾ ಬರೆದ ಮೇಲೆ ಇದನ್ನು ಬರೆಯುವುದರಿಂದ ಕೇವಲ ನನ್ನ ಅನುಭವವನ್ನು ಹೊರಗೆಡೆಹುವುದು ಬಿಟ್ಟರೆ, ಇದು ಯಾವ ರೀತಿಯಲ್ಲೂ ಹೊಸತೇನನ್ನೂ ಹೇಳುತ್ತಿಲ್ಲ, ಇದನ್ನು**